ಆ) ಐಷ್ಯಾಡ್ ಯೋಜನೆಯು ಪರಿಶೀಲನೆಯ ಹಂತದಲ್ಲಿದೆ.

ಇ) ಈ ಯೋಜನೆಯ ಅಂದಾಜು ವೆಚ್ಚ ೩೫ ಕೋಟಿ ರೂ.ಗಳು

ಬಾದಾಮಿ ತಾಲ್ಲೂಕಿನ ಕೆರೂರು ಪಟ್ಟಣದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಅಭಿವೃದ್ಧಿ ಕಾಮಗಾರಿಗಳು

೫೯೬ - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆರೂರು ಪಟ್ಟಣದಲ್ಲಿ ಕೊಳಚೆ ನಿರ್ಮೂಲ ಮಂಡಳಿಯಿಂದ ಯಾವ ವರ್ಷ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ?

ಆ) ಅಲ್ಲಿಂದ ಇಲ್ಲಿಯವರೆವಿಗೆ ಆದ ಮಂಜೂರಾತಿ ಹಣ ಹಾಗೂ ಕಾಮಗಾರಿಗಳ ವಿವರ ಮತ್ತು ಖರ್ಚು ಎಷ್ಟು?

ಇ) ೧೯೯೫-೯೬ನೇ ಸಾಲಿನ ನಿಗಧಿಪಡಿಸಿದ ಹಣವೆಷ್ಟು? ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ) ಹರಿಜನ-ಗಿರಿಜನರಿರುವ ಪ್ರದೇಶಗಳಲ್ಲಿ ತಮ್ಮದೇ ಆದ ನಿವೇಶನ ಹೊಂದಿದ್ದು, ಅಂಥವರಿಗೆ ಮನೆಗಳನ್ನು ಕಟ್ಟಿಸಿ ಕೊಡಲು ಈ ಮಂಡಳಿ ಕ್ರಮ ಕೈಗೊಳ್ಳುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಡಳಿಯ ವತಿಯಿಂದ ಕೆರೂರು ಪಟ್ಟಣದಲ್ಲಿ ಮೊದಲ ಬಾರಿಗೆ ೧೯೯೩-೯೪ ರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಯಿತು. ೧೯೯೪-೯೫ರ ಸಾಲು ಸೇರಿದಂತೆ ಪ್ರಸ್ತುತ ಸಾಲಿನಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಯೋಜನೆಗಳನ್ನು ಸಿದ್ಧಪಡಿಸಲಾಗಿದೆ.

ಆ) ೧೯೯೩-೯೪ಮತ್ತು ೧೯೯೪-೯೫ನೇಸಾಲಿನಲ್ಲಿ ಖರ್ಚು ಮಾಡಿರುವ ವಿವರಗಳು ಕೆಳಕಂಡಂತಿರುತ್ತವೆ.

೧೯೯೩-೯೪ ರ ಸಾಲಿನಲ್ಲಿ ೪.೦೦ ಲಕ್ಷ ರೂ.ಗಳು ಮಂಜೂರಾಗಿದ್ದು ಈ ಹಣದಲ್ಲಿ ರಸ್ತೆಗೆ ಚಪ್ಪಡಿ ಹಾಸುವುದು, ಚರಂಡಿ, ಕೊಳವೆ ಬಾವಿ, ಬೀದಿ ದೀಪಗಳನ್ನು ೨.೭೦ ಲಕ್ಷ ರೂ.ಗಳ ಅಂದಾಜಿನಲ್ಲಿ ಒದಗಿಸಲಾಗಿದೆ.

೧೯೯೪-೯೫ನೇ ಸಾಲಿನಲ್ಲಿ ೦.೯೦ ಲಕ್ಷ ರೂ.ಗಳ ಹಣ ಒದಗಿಸಿದ್ದು, ಈ ಹಣದಲ್ಲಿ ಶೌಚಾಲಯ ಕೊಳವೆ ಬಾವಿ, ಬೀದಿ ದೀಪಗಳನ್ನು ೦.೪೫ ಲಕ್ಷ ರೂ.ಗಳ ವೆಚ್ಚದಲ್ಲಿ ಒದಗಿಸಲಾಗಿದೆ.

ಇ) ೧೯೯೫-೯೬ನೇ ಪ್ರಸಕ್ತ ಸಾಲಿನಲ್ಲಿ ೪.೫೦ ಲಕ್ಷ ರೂ.ಗಳನ್ನು ರಸ್ತೆಗೆ ಚಪ್ಪಡಿ, ಚರಂಡಿ, ಕೊಳವೆ ಬಾವಿ ಮತ್ತು ಬೀದಿ ದೀಪಗಳನ್ನು ಒದಗಿಸಲು ತೆಗೆದಿರಿಸಲಾಗಿದೆ. ಅಂದಾಜುಪಟ್ಟಿಗೆ ಅನುಮೋದನೆ ದೊರೆಯಬೇಕಿದ್ದು ಸದ್ಯದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ಹರಿಜನ-ಗಿರಿಜನವಿರುವ ಪ್ರದೇಶಗಳು ಕೊಳಚೆ ಪ್ರದೇಶಗಳ ಗುಣ-ಲಕ್ಷಣಗಳನ್ನು ಹೊಂದಿದ್ದು, ಕಾಯಿದೆ ಅಡಿಯಲ್ಲಿ ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟಿರಬೇಕು. ಆ ನಿವಾಸಿಗಳು ಸದರಿ ಜಾಗಗಳನ್ನು ಪುನರ್ವಸತಿ ಯೋಜನೆಗಳಿಗೆ ಮಂಡಳಿಗೆ ನೀಡಿದಲ್ಲಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ವಸತಿ ಗೃಹಗಳ ನಿರ್ಮಾಣ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗುವುದು.

ಉ) ಮೇಲೆ ಉತ್ತರಿಸುವಂತೆ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸವದತ್ತಿಯಲ್ಲಿರುವ ಕೋಟೆ ದುರಸ್ತಿ

೫೯೮ - ಶ್ರೀ ಚಂದ್ರಶೇಖರ ಎಂ. ಮಾಮಿನಿ (ಪರಸಗಡ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಸವದತ್ತಿಯಲ್ಲಿ ಪ್ರಾಚೀನ ಕಾಲದ ಕೋಟೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ, ಅದರ ಸಂರಕ್ಷಣೆಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

೩) ಕಳೆದ ೫ ವರ್ಷಗಳಲ್ಲಿ ಸದರಿ ಕೋಟೆಯ ದುರಸ್ತಿಯ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೆ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು? ಈಗಲಾದರೂ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದೇ?

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).

೧) ಬಂದಿದೆ.

೨) ಇದು ರಾಜ್ಯ ಸಂರಕ್ಷಿತ ಸ್ಮಾರಕವಾಗಿದ್ದು ಈ ಇಲಾಖೆಯಿಂದ ೧೯೯೦-೯೧ನೇ ಮತ್ತು ೧೯೯೨-೯೩ನೇ ಸಾಲಿನಲ್ಲಿ ಸಂರಕ್ಷಣಾ ಕಲಸಗಳನ್ನು ಕೈಗೊಳ್ಳಲಾಗಿದೆ.

೩) ೧೯೯೦-೯೧ನೇ ಸಾಲಿನಲ್ಲಿ ರೂ. ೧.೨೧ ಲಕ್ಷ ಹಾಗೂ ೧೯೯೨-೯೩ನೇ ಸಾಲಿನಲ್ಲಿ ರೂ. ೯೯,೩೮೦-೦೦ಗಳ ವೆಚ್ಚದಲ್ಲಿ ಹಾನಿಗೊಂಡ ಕೆಲವು ಭಾಗಗಳ ಕೋಟೆಯ ಸಂರಕ್ಷಣಾ ಕಾರ್ಯಗಳನ್ನು ನಡೆಸಲಾಗಿದೆ. ಮುಂದೆ ಹಂತ ಹಂತವಾಗಿ ಸದರಿ ಕೋಟೆಯ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಸವದತ್ತಿ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶಗಳ ನಿರ್ಮೂಲನೆ

೫೯೯ - ಶ್ರೀ ಚಂದ್ರಶೇಖರ ಎಂ. ಮಾಮನಿ, ಪರಸಗಡಕ್ಷೇತ್ರ (ಸವದತ್ತಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕಿನಲ್ಲಿರುವ ಕೊಳಚೆ ಪ್ರದೇಶಗಳೆಷ್ಟು (ವಿವರಗಳನ್ನು ಒದಗಿಸುವುದು)